# ಸಾಕ್ಷಿಗೆ ಕೇಳಿ ನೋಡು

## ಗಜಲ್

ನಿನ್ನೆಡೆಗೆ ಮಿದು ಮಣ್ಣನ್ನು ತುಳಿದು ಬರುವೆ
ಒದ್ದೆ ಹೆಜ್ಜೆಯ ಗುರುತುಗಳಿರಲಿ ನಿನ್ನ ಅಂಗಳದವರೆಗೆ

ಕೇದಗೆ ಹೂವಿದೆ, ಹೊಳೆವ ಚಿಲಕಕ್ಕೆ ಸಿಕ್ಕಿಸಿರುವೆ
ಕಂಪು ಸೂಸಿರಲಿ ನೀ ಕದ ತೆರೆವ ಕ್ಷಣದವರೆಗೆ

ಪಂಜರದ ಮುಗ್ಧ ಮುದ್ದು ಗಿಳಿಗೆ ಹೇಳಿ ಬಂದಿರುವೆ
ಕಾದು ತೆರಳಿದ ನಿರಾಸೆ ನಾನೇ ಎಂದದು ಉಸುರಲಿದೆ ನಿನಗೆ

ಗದ್ದೆ ಗಾಳಿಯ ಹಸಿರು ಸಂತೈಕೆಯಿತ್ತು ನನ್ನ ಮೈದಣಿವಿಗೆ
ಸಾಕ್ಷಿ ಬೇಕಿದ್ದರೆ ಕೇಳಿನೋಡು ಉದ್ಯಾನದ ಮರಗಳಿಗೆ

ಕಲ್ಪಿಸಿಕೋ ಒಮ್ಮೆ ನನ್ನ ಬಿಂಬವನ್ನು ನಿನ್ನ ಬಾಹುಗಳೊಳಗೆ
ಎಲ್ಲೋ ಮನಸು ನೆಟ್ಟು ತಳ್ಳದಿರು ಮರೆವಿನ ಮಡುವಿಗೆ

**● ಕೆ.ಎಸ್. ರವಿಕುಮಾರ್**

